XXV

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ,
ನಂ.4 ಕಟ್ಟಡಗಳ ಉಪವಿಭಾಗ
ಲೋಕೋಪಯೋಗಿ ಇಲಾಖೆ, ಬೆಂಗಳೂರು-560 001.

ದೂರವಾಣಿ ಸಂಖ್ಯೆ: 080-22267585
ಇ-ಮೇಲ್: aeeno4bldg@gmail.com

ಕರ್ನಾಟಕ ಸರ್ಕಾರ

# ಲೋಕೋಪಯೋಗಿ ಇಲಾಖೆ

ಸಂ: ಸಕಾಅ/ಕಉವಿ-4/ಸ.ಇಂ/ಕ.ದೃಢೀಕರಣ ಪತ್ರ/2022-23/ 989 ದಿನಾಂಕ: 29-12-2022

ರವರಿಗೆ,

Principal,
MEC Public School,
C.A. Site no: 12, 9th A Sector,
Yelahanka New Town,
Bangalore – 560 064.

ಮಾನ್ಯರೆ,

ವಿಷಯ: ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ.

ಉಲ್ಲೇಖ: 1. ತಮ್ಮ ವಿದ್ಯಾ ಸಂಸ್ಥೆಯ ಕಛೇರಿ ಪತ್ರ ದಿನಾಂಕ 12.12.2022
2. ಕರ್ನಾಟಕ ಸರ್ಕಾರ ಅಪರ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ರವರ ಸುತ್ತೋಲೆ ಪತ್ರ ಸಂಖ್ಯೆ : ಲೋಇ 59 ಬಿಇಡಿ 2019 ಬೆಂಗಳೂರು ದಿ: 06.05.2022

– – –

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, MEC Public School, C.A. Site no: 12, 9th A Sector, Yelahanka New Town Bangalore -560 064 ಇಲ್ಲಿನ ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರ ನೀಡಲು ಉಲ್ಲೇಖಿತ (1)ರ ಪತ್ರದಲ್ಲಿ ಕೋರಿರುತ್ತೀರಿ.

ಅದರಂತೆ, ದಿನಾಂಕ: 21.12.2022 ರಂದು ಸಂಬಂಧಪಟ್ಟ ಸಹಾಯಕ ಇಂಜಿನಿಯರ್ ರವರೊಂದಿಗೆ ಸದರಿ ಶಾಲಾ ಕಟ್ಟಡವನ್ನು ಶ್ರೀಮತಿ. ಜಯಪ್ರಭಾ ಆರ್. ಪ್ರಾಂಶುಪಾಲರು ಮತ್ತು ಶ್ರೀ. ವಿನಯ್ ಜಿ.ಆರ್. ವ್ಯವಸ್ಥಾಪಕರು ಇವರೊಂದಿಗೆ ಪರಿವೀಕ್ಷಣೆಯನ್ನು ಕೈಗೊಳ್ಳಲಾಯಿತು.

MEC Public School, C.A. Site no: 12, 9th A Sector, Yelahanka New Town, Bangalore - 560 064 ಇಲ್ಲಿನ ಶಾಲಾ ಕಟ್ಟಡವನ್ನು 16184.00 ಚ.ಮೀ ಜಾಗದಲ್ಲಿ ನಾಲ್ಕು ಬ್ಲಾಕ್‌ಗಳನ್ನಾಗಿ ವಿಂಗಡಿಸಿದ್ದು, ನಾರ್ಥ್ ಬ್ಲಾಕ್‌ನ್ನು 1991-92ರಲ್ಲಿ ನೆಲ ಮಹಡಿ, 2001-02 ರಲ್ಲಿ ಮೊದಲನೇ ಮಹಡಿ ಮತ್ತು 2019 ರಲ್ಲಿ ಎರಡನೇ ಮಹಡಿಯಲ್ಲಿ ನಿರ್ಮಿಸಲಾಗಿರುತ್ತದೆ, ವೆಸ್ಟ್ ಮತ್ತು ಸೌತ್ ಬ್ಲಾಕ್‌ನ್ನು 1990 ರಲ್ಲಿ ಹಾಗೂ ಈಸ್ಟ್ ಬ್ಲಾಕ್‌ನ್ನು 2018ರಲ್ಲಿ ನಿರ್ಮಿಸಲಾಗಿರುತ್ತದೆ. ಕರ್ನಾಟಕ ಹೌಸಿಂಗ್ ಬೋರ್ಡ್, (CMC Approved Plan) ಬೆಂಗಳೂರು ವಿಭಾಗ, ಬೆಂಗಳೂರು ರವರು ಸದರಿ ಶಾಲಾ ಕಟ್ಟಡಕ್ಕೆ ಅನುಮೋದಿತ ನಕ್ಷೆಯನ್ನು ನೀಡಿರುತ್ತಾರೆ.

ಸದರಿ ಕಟ್ಟಡವು RCC Framed Structure ಕಟ್ಟಡವಾಗಿದ್ದು ನಾರ್ಥ್ ಮತ್ತು ಈಸ್ಟ್ ಬ್ಲಾಕ್‌ಗಳಲ್ಲಿ ನೆಲ ಮಹಡಿಯೊಂದಿಗೆ ಎರಡು ಅಂತಸ್ತಿನ ಕಟ್ಟಡ (ನೆಲ, ಮೊದಲನೇ ಮತ್ತು ಎರಡನೇ ಮಹಡಿಯಲ್ಲಿ ಶೀಟ್‌ರೂಫ್), ಸೌತ್ ಮತ್ತು ವೆಸ್ಟ್ ಬ್ಲಾಕ್‌ಗಳಲ್ಲಿ ನೆಲ ಮಹಡಿಯೊಂದಿಗೆ ಒಂದು ಅಂತಸ್ತಿನ ಕಟ್ಟಡವಾಗಿರುತ್ತದೆ. ಕಟ್ಟಡದಲ್ಲಿ ಗೋಡೆಗಳನ್ನು ಇಟ್ಟಿಗೆಯಿಂದ ನಿರ್ಮಿಸಿದ್ದು, ವಿಟ್ರಿಫೈಡ್ ನೆಲಹಾಸು, ಮರದ ಮತ್ತು ಎಂ.ಎಸ್. ಬಾಗಿಲುಗಳು, ಅಲ್ಯೂಮಿನಿಂ ಮತ್ತು ಮರದ ಕಿಟಕಿಗಳನ್ನು ಅಳವಡಿಸಲಾಗಿರುತ್ತದೆ.

ನಂತರ ಹಾಜರಿದ್ದ ಶಾಲಾ ಸಿಬ್ಬಂದಿಯವರೊಂದಿಗೆ ಕಟ್ಟಡದ ಒಳ ಹಾಗೂ ಹೊರಭಾಗವನ್ನು ಪರಿವೀಕ್ಷಣೆ ಮಾಡಲಾಗಿ, ಸದರಿ ಕಟ್ಟಡವನ್ನು ನಾಲ್ಕು ಬ್ಲಾಕ್‌ಗಳಾಗಿ ವಿಂಗಡಿಸಿದ್ದು ಒಟ್ಟು 37 ಶಾಲಾ ಕೊಠಡಿಗಳೊಂದಿಗೆ ಈಸ್ಟ್ ಬ್ಲಾಕ್‌ನಲ್ಲಿ ಒಂದು ಸಭಾಂಗಣವಿರುವುದು ಕಂಡುಬಂದಿರುತ್ತದೆ.

Scanned by PDF Scanner

Gooly Consultancey Services, ISO: 9001-2015 Certified Laboratory as per ISO/IEC 17025 : 2017, No. 230, Opp. G.R. Lavender Apartment, Sai Enclave Layout, Kothanur Dinne, J.P. Nagara 8th Phase, Bangalore - 76 ಇವರು ಸದರಿ ಶಾಲಾ ಕಟ್ಟಡಗಳಿಗೆ Non Destructive Test ಅಡಿಯಲ್ಲಿ Rebound hammer test and Ultrasonic pulse velocity test ಗಳನ್ನು ಕೈಗೊಂಡು ಅದರ ವರದಿಗಳನ್ನು ಸಲ್ಲಿಸಿದ್ದು, ಸದರಿ ವರದಿಯಂತೆ Rebound hammer test ಪ್ರಕಾರ In site strength of Concrete Range is 26 N/mm2 ಮತ್ತು Ultra sonic pluse velocity test ಪ್ರಕಾರ "Good Concrete" ಎಂಬುದಾಗಿ ವರದಿಸಿರುತ್ತಾರೆ.

ತಾವುಗಳು ಈ ಕೆಳಕಂಡ ಅಗತ್ಯ ದಾಖಲೆಗಳನ್ನು ಸಲ್ಲಿಸಿರುತ್ತೀರಿ.

1. ಸಕ್ಷಮ ಪ್ರಾಧಿಕಾರರಿಂದ ಪಡೆದಿರುವ ಅನುಮೋಧಿತ ನಕ್ಷೆ ಹಾಗೂ CMC Approved Plan
2. N.O.C. From Education Department
3. Ultrasonic Pulse Velocity Test Report
4. Rebound Hammer Test result.
5. Katha Certificate & Sale deed
6. Certificate of Registeration
7. As built drawing
8. Affiliation Copy

ಉಲ್ಲೇಖ (2)ರ ಸರ್ಕಾರದ ಸುತ್ತೋಲೆಯಲ್ಲಿನ ಕ್ರಮ ಸಂಖ್ಯೆ (2)ರಲ್ಲಿ ಸೂಚಿಸಿರುವಂತೆ ನಗರ ಪ್ರದೇಶದಲ್ಲಿ ಒಂದು ಶಾಲೆಗೆ/ಕಾಲೇಜ್‌ಗೆ – ರೂ. 5,000.00 ಗಳನ್ನು ಶುಲ್ಕವಾಗಿ ಪಾವತಿಸಲು ಸೂಚಿಸಿರುವ ಹಿನ್ನಲೆಯಲ್ಲಿ ಸದರಿ ಶಾಲಾ/ಕಾಲೇಜು ಸಂಸ್ಥೆಯವರು ಚಲನ್ ಸಂಖ್ಯೆ: CR1222005900771382 dtd. 27.12.2022 ರಲ್ಲಿ ರೂ. 5,000.00 (ಐದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಪಾವತಿಸಲಾಗಿರುತ್ತದೆ.

ಸದರಿ ಶಾಲಾ ಕಟ್ಟಡದ ಎಲ್ಲಾ ಮಹಡಿಗಳು ಹಾಗೂ ಪ್ರಮುಖ ಭಾಗಗಳನ್ನು ಪರಿಶೀಲಿಸಲಾಯಿತು. ಈ ಸಮಯದಲ್ಲಿ ಮೇಲ್ನೋಟಕ್ಕೆ ಕಟ್ಟಡದಲ್ಲಿ ಯಾವುದೇ ಬಿರುಕುಗಳಾಗಲೀ ಮತ್ತು ಗೋಡೆ/ ಮೇಲ್ಛಾವಣಿಯಗಳಾಗಲೀ ಶೇವಾಂಶ ಕಂಡು ಬಂದಿರುವುದಿಲ್ಲ ಈ ಹಿನ್ನಲೆಯಲ್ಲಿ ಸದರಿ ಕಟ್ಟಡವು ಸುರಕ್ಷಿತವಾಗಿದೆ ಎಂದು ಅಭಿಪ್ರಾಯಿಸಲಾಯಿತು. ಸದರಿ ಕಟ್ಟಡವನ್ನು ನಿರ್ವಹಣೆ ಮಾಡುವ ಜವಬ್ದಾರಿಯು ಸದರಿ ವಿದ್ಯಾಸಂಸ್ಥೆಯವರದಾಗಿರುತ್ತದೆ ಹಾಗೂ ಈ ಪ್ರಮಾಣ ಪತ್ರವನ್ನು ಯಾವುದೇ ಸಮಯದಲ್ಲಿ ಹಿಂಪಡೆಯುವ ಷರತ್ತಿಗೊಳಪಟ್ಟಿರುತ್ತದೆ.

ಮುಂದುವರೆದು, ಕಟ್ಟಡದ ಮಂಜೂರಾದ ನಕ್ಷೆಗೆ ವಿರುದ್ಧವಾಗಿ ಯಾವುದಾದರೂ ಬದಲಾವಣೆ ಅಥವಾ ನಿರ್ಮಾಣ ಮಾಡಿದಲ್ಲಿ ಸದರಿ ಪ್ರಮಾಣ ಪತ್ರವು ತನ್ನಿಂತಾನೆ ರದ್ದುಗೊಳ್ಳುವುದೆಂದು ತಿಳಿಸುತ್ತಾ, ಸದರಿ ಪ್ರಮಾಣ ಪತ್ರವನ್ನು MEC Public School, C.A. Site no: 12, 9th A Sector, Yelahanka New Town, Bangalore - 560 064 ಇಲ್ಲಿನ ಶಾಲಾ ಕಟ್ಟಡಕ್ಕೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಬಳಸಬಹುದಾಗಿರುತ್ತದೆ. ಅದರಂತೆ, ಸದರಿ ಶಾಲಾ ಕಟ್ಟಡಕ್ಕೆ ಸುರಕ್ಷಾ ಪ್ರಮಾಣ ಪತ್ರವನ್ನು ಮುಂದಿನ ಆದೇಶದವರಿಗೆ ನೀಡಲಾಗಿದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು,
ನಂ.4 ಕಟ್ಟಡಗಳ ಉಪವಿಭಾಗ,
ಬೆಂಗಳೂರು.

Assistant Executive Engineer
No. 4, Buildings, Sub-Division
Bangalore - 560 001.

Secretary
Model Education Centre
Yelahanka New Town
BANGALORE - 560 064